**ಸಾಕ್ಷಿಯನ್ನು ದಿನಾಂಕಃ 25.10.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿಗಳ ಪರ ಶ್ರೀ. ಜಿ.ಎನ್.ಎನ್. ವಕೀಲರಿಂದಃ**

ನನಗೆ ವಾದಿಗಳ ಪರಿಚಯ ಇರುವುದಿಲ್ಲ ಹಾಗು ಅವರು ಯಾವ ಊರಿನವರು ಎಂದು ನನಗೆ ಗೊತ್ತಿರುವುದಿಲ್ಲ. ವಾದಿಗಳು ದಾವಾ ಆಸ್ತಿ ತಮಗೆ ಸೇರಬೇಕೆಂದು ಈ ದಾವೆ ಹೂಡಿರುತ್ತಾರೆ. ವಾದಿಗಳು ಈ ದಾವೆಯನ್ನು ಎನ್. ಬೇಗೂರು ಗ್ರಾಮದ ಸ.ನಂ. 43 ರಲ್ಲಿ 05 ಎಕರೆ ವಿಸ್ತೀರ್ಣಕ್ಕೆ ಹೂಡಿರುತ್ತಾರೆ. ಸದರಿ ಆಸ್ತಿಯ ಮೂಲ ಸ.ನಂ. ಹಿಂದೆ 43/8 ಆಗಿತ್ತು ಎಂದರೆ ಸರಿ. ಸದರಿ ಸ.ನಂ. ಆಸ್ತಿಯು ದುರಸ್ತಿಯಾಗದೇ ಇರುವ ಕಾರಣ ಅವುಗಳನ್ನು ಒಟ್ಟುಗೂಡಿಸಿ ಸ.ನಂ. 43 ಎಂದು ನೀಡಲಾಗಿದೆ ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸದರಿ ಒಟ್ಟುಗೂಡಿಸಿದ ಸ.ನಂ. 43 ರಲ್ಲಿ ಒಟ್ಟು 141 ಎಕರೆ 09 ಗುಂಟೆ ವಿಸ್ತೀರ್ಣದ ಜಮೀನುಗಳಿದ್ದು ಅವುಗಳಲ್ಲಿ 05 ಎಕರೆ ವಿಸ್ತೀರ್ಣದ ಜಮೀನಿನಲ್ಲಿ ವಾದಿಗಳು ಸ್ವಾಧೀನ ಹೊಂದಿ ವ್ಯವಸಾಯ ಮಾಡಿಕೊಂಡಿರುತ್ತಾರೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವು ವ್ಯವಸಾಯ ಮಾಡಿಕೊಂಡಿರುತ್ತೇವೆಂದು ನುಡಿಯುತ್ತಾರೆ. ದಾವಾ ಆಸ್ತಿಯ ಹಿಂದಿನ ಸ.ನಂ. 43/8 1 ನೇ ವಾದಿಯ ಮಾವ ಮತ್ತು 2 ರಿಂದ 4 ನೇ ವಾದಿಗಳ ತಾತನಾದ ಚೆನ್ನಶೆಟ್ಟಿ ಎನ್ನುವವರ ಹೆಸರಿಗೆ ಕೈ-ಬರಹದ ಆರ್.ಟಿ.ಸಿ. ಓಡುತ್ತಿತ್ತು ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸದರಿ ಚೆನ್ನಶೆಟ್ಟಿ ತೀರಿ ಹೋದ ನಂತರ ವಾದಿಗಳ ಹೆಸರಿಗೆ ದಾವಾ ಆಸ್ತಿಗೆ ಸಂಬಂಧಿಸಿದಂತೆ ಖಾತೆ ಬದಲಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಅಸ್ತಿಯು 1959 – 1960 ನೇ ಸಾಲಿನಲ್ಲಿ 1 ನೇ ವಾದಿಯ ಮಾವನಾದ ಚೆನ್ನಶೆಟ್ಟಗೆ ಸರ್ಕಾರದಿಂದ ಮಂಜೂರಾಗಿರುವ ಆಸ್ತಿ ಎಂದರೆ ಸರಿಯಲ್ಲ. ಆ ರೀತಿ ಮಂಜೂರಾದ ದಿನದಿಂದಲೂ ಸಹ ಸದರಿ ಚೆನ್ನಶೆಟ್ಟಿ ಹಾಗು ಅವರ ಕುಟುಬದವರಾದ ವಾದಿಗಳು ಸ್ವಾಧೀನಾನುಭವ ಹೊಂದಿ ವ್ಯವಸಾಯ ಮಾಡಿಕೊಂಡು ಬರುತ್ತಿದ್ದರು ಎಂದರೆ

ಸರಿಯಲ್ಲ. ದಾವಾ ಆಸ್ತಿಗು ಹಾಗು ನಮಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆಸಿರುವ ವಿಚಾರಗಳನ್ನು ತಿಳಿದುಕೊಂಡಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ದಾವಾ ಆಸ್ತಿಯು ನನ್ನ ತಾಯಿಗೆ ಮಂಜೂರಾದ ಬಗ್ಗೆ ತಿಳಿಸಿದ್ದು ಆ ಬಗ್ಗೆ ಮಂಜೂರಾತಿ ಪತ್ರ ಹಾಗು ಇತರೇ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಕೈ-ಬರಹದ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿರುತ್ತೇನೆಂದು ನುಡಿಯುತ್ತಾರೆ. ನಾನು ಆ ರೀತಿ ಯಾವುದೇ ಕೈ-ಬರಹದ ಪಹಣಿ ಪತ್ರಿಕೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ನನಗೆ ಪಿತ್ರಾರ್ಜಿತ ಆಸ್ತಿ ಎಂದು ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ತಿಳಿಸಿದ್ದು ಆ ಬಗ್ಗೆ ಕೈ-ಬರಹದ ಪಹಣಿ ಪತ್ರಿಕೆ ಮತ್ತು ಫೋಟೋ ಹಾಜರುಪಡಿಸಿರುತ್ತೇನೆ. ನನ್ನ ತಾಯಿ ಮರಣ ಹೊಂದಿದ ನಂತರ ಅವರ ಹೆಸರಿನಲ್ಲಿದ್ದ ಜಮೀನಿಗೆ ಖಾತೆ ಬದಲಿಸಿಕೊಳ್ಳಲು ಅರ್ಜಿ ಸಲ್ಲಿಸಿರುತ್ತೇನೆ. ಸಾಕ್ಷಿ ಮುಂದುವರೆದು ಇನ್ನು ಖಾತೆ ಬದಲಾವಣೆಯಾಗಿರುವುದಿಲ್ಲವೆಂದು ನುಡಿಯುತ್ತಾರೆ. ವಾದಿಗಳು ಈ ದಾವೆಯನ್ನು ಸಲ್ಲಿಸಿದ ನಂತರ ನನ್ನ ಪ್ರತಿವಾದ ಪತ್ರದ ಹೇಳಿಕೆಗೆ ಪೂರಕವಾಗಿ ದಾಖಲೆಗಳನ್ನು ಸೃಷ್ಟಿಸಿಕೊಳ್ಳುವ ಸಲುವಾಗಿ ಆ ಬಗ್ಗೆ ಖಾತೆ ಬದಲಿಸಲು ಅರ್ಜಿ ಕೊಟ್ಟಿರುತ್ತೇನೆಂದರೆ ಸರಿಯಲ್ಲ. ಆ ರೀತಿ ಖಾತೆ ಬದಲಿಸಲು ಅರ್ಜಿ ನೀಡಿದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಾವಾ ಆಸ್ತಿಯಲ್ಲಿ ಸ್ವಾಧೀನ ಹೊಂದಿರುವ ಬಗ್ಗೆ ಕೈ-ಬರಹದ ಆರ್.ಟಿ.ಸಿ. ಯನ್ನು ಹೊರತುಪಡಿಸಿ ದಾವಾ ಆಸ್ತಿಯಲ್ಲಿ ಬೋರ್ ಅನ್ನು ಹಾಕಿಸಿರುವ ಬಗ್ಗೆ ರಶೀದಿ ಹಾಜರುಪಡಿಸಿರುತ್ತೇನೆ. ದಾವಾ ಆಸ್ತಿಯಲ್ಲಿ ಮನೆಯನ್ನು ಮಾಡಿಕೊಂಡು ವಾಸವಿರುವ ಬಗ್ಗೆ ದಾಖಲೆಗಳಿರುತ್ತವೆ, ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ದಾವಾ ಆಸ್ತಿಯಲ್ಲಿ ನಾನು ಯಾವುದೇ ಮನೆಯನ್ನು ಕಟ್ಟಿ ವಾಸ

ಮಾಡುತ್ತಿಲ್ಲ ಬದಲಾಗಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಿ.ಡಿ.–1 ದಾಖಲೆಯನ್ನು ನಾನೇ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಿ.ಡಿ.–2 ರ ದಾಖಲೆಯಲ್ಲಿ ಈ ಪ್ರಕರಣಕ್ಕೆ ಅನುಕೂಲವಾಗುವ ರೀತಿಯಲ್ಲಿ ತಿದ್ದುಪಡಿ ಮಾಡಿಕೊಂಡು ದಾಖಲೆ ಸೃಷ್ಟಿಸಿಕೊಂಡಿರುತ್ತೇನೆಂದರೆ ಸರಿಯಲ್ಲ. ನಿ.ಡಿ.–2 ರಲ್ಲಿ ನನ್ನ ತಾಯಿಯಾದ ದೇವಮ್ಮ ಎಂಬ ಹೆಸರಿನ ಮುಂದೆ ಯಾವುದೇ ಆಸ್ತಿಯ ಸ.ನಂ. ಹಾಗು ವಿಸ್ತೀರ್ಣ ನಮೂದಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಗಳಿಗೆ ಸೇರಿದ ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ನಿ.ಡಿ.–3 ಅನ್ನು ಸೃಷ್ಟಿಸಿಕೊಂಡಿರುತ್ತೇವೆಂದರೆ ಸರಿಯಲ್ಲ. ಅದೇ ರೀತಿ ನಿ.ಡಿ.–4 ಅನ್ನೂ ಸಹ ನನ್ನ ತಾಯಿಯ ಹೆಸರನ್ನು ನಮೂದಿಸಿ ಈ ದಾವೆಗೋಸ್ಕರ ಸೃಷ್ಟಿಸಿಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆಂದರೆ ಸರಿಯಲ್ಲ. ನಿ.ಡಿ.–4 ರಲ್ಲಿ ನನ್ನ ತಾಯಿಯಾದ ದೇವಮ್ಮ ಎಂಬ ಹೆಸರಿನ ಮುಂದೆ ಯಾವುದೇ ಆಸ್ತಿಯ ಸ.ನಂ. ಹಾಗು ವಿಸ್ತೀರ್ಣ ನಮೂದಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಡಿ.–5 ರಂತೆ ಬೋರ್ ಇರುವ ಬಗ್ಗೆ ವಿದ್ಯುತ್ ಸಂಪರ್ಕ ಪಡೆದಿರುತ್ತೇವೆ. ಆ ರೀತಿ ವಿದ್ಯುತ್ ಸಂಪರ್ಕ ಪಡೆದ ಬಗ್ಗೆ ದಾಖಲೆ ಇರುತ್ತದೆ. ಆ ಬಗ್ಗೆ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಬದಲಾಗಿ ಶಕ್ತಿ ಬೋರ್ ವೆಲ್ಸ್ ಇವರ ಜೊತೆ ಶಾಮೀಲಾಗಿ ನಿ.ಡಿ.–5 ಅನ್ನು ಈ ದಾವೆಗೋಸ್ಕರ ಸೃಷ್ಟಿಸಿಕೊಂಡಿರುತ್ತೇನೆಂದರೆ ಸರಿಯಲ್ಲ. ಅದೇ ರೀತಿ ನಿ.ಡಿ.–6 ಅನ್ನೂ ಸಹ ಗ್ರಾಮ ಲೆಕ್ಕಾಧಿಕಾರಿಗಳೊಂದಿಗೆ ಶಾಮೀಲಾಗಿ ನನ್ನ ತಾಯಿಯ ಹೆಸರನ್ನು ನಮೂದಿಸಿ ಈ ದಾವೆಗೋಸ್ಕರ ಸೃಷ್ಟಿಸಿಕೊಂಡ ದಾಖಲೆ ಎಂದರೆ ಸರಿಯಲ್ಲ. ಸದರಿ ನಿ.ಡಿ.–6 ರ ಆದೇಶದ ಮೇರೆಗೆ ನನ್ನ ತಾಯಿಯ ಹೆಸರಿಗೆ ಖಾತೆ ಬದಲಾಗಿರುವ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸದರಿ ನಿ.ಡಿ.–6 ದಾಖಲೆ ಈ ದಾವೆಗೋಸ್ಕರ ಸೃಷ್ಟಿಸಿಕೊಂಡ ದಾಖಲೆ

ಎಂದರೆ ಸರಿಯಲ್ಲ. ನಿ.ಡಿ.–8 ರಿಂದ ನಿ.ಡಿ.–18ರ ಫೋಟೋದಲ್ಲಿರುವ ಆಸ್ತಿಗೂ ಹಾಗು ವಾದಿಗಳ ದಾವಾ ಆಸ್ತಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕಃ 05.03.2023 ರಂದು ವಾದಿಗಳು ವ್ಯವಸಾಯ ಮಾಡಿಕೊಂಡು ಹೋಗುತ್ತಿದ್ದ ದಾವಾ ಆಸ್ತಿಗೆ ನಾವು ತೊಂದರೆ ಕೊಟ್ಟಿರುತ್ತೇವೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಆಸ್ತಿಯಲ್ಲಿ ನಾವೇ ಸ್ವಾಧೀನ ಹೊಂದಿ ವ್ಯವಸಾಯ ಮಾಡಿಕೊಂಡು ಹೋಗುತ್ತಿದ್ದೇವೆಂದು ನುಡಿಯುತ್ತಾರೆ. ನನ್ನ ತಕರಾರಿನಲ್ಲಿ ನಾವು ಸ್ವಾಧೀನ ಹೊಂದಿ ವ್ಯವಸಾಯ ಮಾಡಿಕೊಂಡು ಹೋಗುತ್ತಿದ್ದ ಜಮೀನಿನ ಚೆಕ್ಕುಬಂದಿ ಬರೆಸಿರುತ್ತೇನೆ. ವಾದಿಗಳು ದಾವೆಯಲ್ಲಿ ತಿಳಿಸಿರುವ ದಾವಾ ಆಸ್ತಿಯ ಚೆಕ್ಕುಬಂದಿಯನ್ನು ತಿಳಿದುಕೊಂಡಿರುವುದಿಲ್ಲ. ದಾವಾ ಷೆಡ್ಯೂಲ್ ಚೆಕ್ಕುಬಂದಿಯ ಒಳಗೆ ವಾದಿಗಳೇ ವ್ಯವಸಾಯ ಮಾಡಿಕೊಂಡು ಸ್ವಾಧೀನಾನುಭವ ಹೊಂದಿದ್ದು ನಾವು ಯಾವ ಸಮಯದಲ್ಲೂ ಸಹ ಸ್ವಾಧೀನಾನುಭವ ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವೇ ಸ್ವಾಧೀನಾನುಭವ ಹೊಂದಿ ವ್ಯವಸಾಯ ಮಾಡಿಕೊಂಡು ಬರುತ್ತಿದ್ದೇವೆಂದು ನುಡಿಯುತ್ತಾರೆ. ನಾವು ಇತ್ತೀಚೆಗೆ ಬಂದು ಎನ್.ಬೇಗೂರು ಗ್ರಾಮದಲ್ಲಿ ವಾಸ ಮಾಡಿಕೊಂಡಿದ್ದೇವೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**